೭

ಸ್ವಾತಂತ್ರ್ಯೋತ್ತರ ಕಾಲ

ಸ್ವರಾಜ್ಯವು ಸುರಾಜ್ಯವಾಗುವದೆಂತು ?

ಸ್ವರಾಜ್ಯದ ಅರುಣೋದಯ !

ಚಲೇಜಾವ ಚಳವಳಿಯೇ ಸ್ವಾತಂತ್ರ್ಯದ ಕೊನೆಯ ಹೋರಾಟವೆಂದು ಭವಿಷ್ಯ ನುಡಿದು ಅದಕ್ಕಾಗಿಯೇ " ಮಾಡು ಇಲ್ಲವೆ ಮಡಿ " ಎಂಬ ಮಂತ್ರದಿಂದ ಗಾಂಧೀಜಿ ಯವರು ಭಾರತದ ಜನಾಂಗಕ್ಕೆ ವಿದ್ಯುತ್ ಶಕ್ತಿಯ್ನು ಸ್ಫೂರ್ತಿಕೊಟ್ಟು ೮ ನೇ ಆಗಸ್ಟದ ಗೊತ್ತುವಳಿಯನ್ನು ಪಾಸು ಮಾಡಿಸಿಕೊಂಡಿದ್ದರು. ನಾವು ಬೇಡ ಬೇಡವೆಂದರೂ ಬ್ರಿಟಿ ಶರು ತುಸು ದಿನಗಳಲ್ಲಿಯೇ ಸ್ವರಾಜ್ಯಕೊಟ್ಟು ಭಾರತದಿಂದ ತೊಲಗುವರೆಂದು ಸರದಾರ ವಲ್ಲಭಭಾಯಿ ಪಟೇಲರು ಆತ್ಮವಿಶ್ವಾಸದಿಂದ ಹೇಳಿದ್ದರು. ದೂರದೃಷ್ಟಿಯ ಚತುರ ರಾಜಕಾರಣಿಗಳಿಗೆ ಹತ್ತೆಂಟು ವರುಷದ ಮುಂದಿನ ಚಿತ್ರದ ಸಾಕ್ಷಾತ್ಕಾರವಾಗುವದು. ಅದು ಸಾಮಾನ್ಯ ಜನರಿಗೆ ತಿಳಿಯುವದಿಲ್ಲ. ೧೯೪೨ ರ ಚಲೇಜಾವ ಕ್ರಾಂತಿಯೇ ಭಾರ ತೀಯ ಸ್ವಾತಂತ್ರ್ಯ ಸಂಗ್ರಾಮದ ಕೊನೆಯ ಹೋರಾಟವಾಯಿತು. ಈ ಕ್ರಾಂತಿಯ ಹೋರಾಟದ ಉಗ್ರತೆ ೧೯೪೪ ರ ಮಧ್ಯಕ್ಕೆ ಕಡಿಮೆಯಾಗಿ ಗಾಂಧೀಜಿಯವರ ಬಿಡು ಗಡೆಯಾಯಿತು. ಕ್ರಾಂತಿವೀರ ಸುಭಾಷಚಂದ್ರ ಬೋಸರು ಬ್ರಿಟಿಶರ ಬಂಧನದಿಂದ ಯುಕ್ತಿಯಿಂದ ನುಸುಳಿ ಪಾರಾಗಿ ಅಫಗಾನಿಸ್ತಾನ ಮಾರ್ಗವಾಗಿ ಯುರೋಪ ಖಂಡಕ್ಕೆ ಹೋಗಿ ಹಿಟ್ಲರ ಮುಸಲೋನಿಯವರನ್ನು ಕಂಡು ಅವರೊಂದಿಗೆ ಮಾತುಕತೆ ನಡೆಸಿ ಪೂರ್ವಕ್ಕೆ ಬಂದರು. ಬ್ರಿಟಿಶರ ಅಂಕೆಯಲ್ಲಿದ್ದ ಭಾರತೀಯ ಸೈನ್ಯದಲ್ಲಿ ಅಶಾಂತಿ ಅಸಂ ತೋಷಗಳನ್ನು ಉಂಟು ಮಾಡಿ ' ಆಝಾದ ಹಿಂದ ಫೌಜ " ಎಂಬ ಸಶಸ್ತ್ರ ಸೇನಾ ಪಡೆಯನ್ನು ನಿರ್ಮಿಸಿ ಜಪಾನೀ ಸೈನ್ಯದೊಂದಿಗೆ ಬ್ರಹ್ಮದೇಶದಲ್ಲಿ ನುಗ್ಗಿ ಭಾರತದ ಪೂರ್ವಗಡಿಯಲ್ಲಿಯ ಮಣಿಪೂರದ ಮೇಲೆ ದಾಳಿ ಇಟ್ಟರು. ಅತ್ತ ಸಿಂಗಾಪೂರದ ಪತನವಾಯಿತು. ದ್ವಿತೀಯ ಮಹಾಯುದ್ಧದಲ್ಲಿ ಮೊದಮೊದಲು ಹಿಟ್ಲರನಿಗೆ ಭಾರಿ ಜಯ ದೊರಕಿತಾದರೂ ಎರಡುಕಡೆಗೆ ಯುದ್ಧಕ್ಷೇತ್ರ ವಿಸ್ತರಿಸಿದ್ದರಿಂದ (ಭೂಮಧ್ಯ ಸಮುದ್ರ ಮತ್ತು ರಶಿಯಾ) ಯುದ್ಧದ ರೂಪ ಬದಲಾಗಹತ್ತಿತು. ಜಪಾನದ ಹಿರೋ ಶಿಮಾದಲ್ಲಿ ಅಟಂ ಬಾಂಬು ಬಿದ್ದಾ ಕ್ಷಣಾರ್ಧದಲ್ಲಿ ಲಕ್ಷಾವಧಿ ಜನರು ಅದಕ್ಕೆ ಆಹುತಿ ಯಾದದ್ದೇ ಯುದ್ಧದ ಕೊನೆಯ ಅಂಕಿಗೆ ಕಾರಣವಾಯಿತು. ಮುಸಲೋನಿ ಹಿಟ್ಲರರು ಆತ್ಮಹತ್ಯೆ ಮಾಡಿಕೊಂಡರು. ಜಪಾನವೂ ಜರ್ಮನಿಯೂ ಶರಣು ಬಂದು ಯುದ್ಧ ನಿಲ್ಲಿಸಿದವು.

ಭಾರತೀಯ ಸೈನ್ಯಪಡೆಯ ಸಾವಿರಾರು ಜನರು ಜಪಾನದ ಸೈನ್ಯಕ್ಕೆ ಶರಣು ಬಂದಾಗಲೇ ಸುಭಾಷಚಂದ್ರ ಬೋಸರು ಅದಕ್ಕೆ ನಾಯಕರಾಗಿ ಅದೇ ಸೈನ್ಯವನ್ನು

ನುಗ್ಗ ಹತ್ತಿದ್ದರು, ಯಾವದೇ ಪರಕೀಯ ಸರಕಾರಗಳ ಸೈನಿಕ ಸಹಾಯ ಪಡೆದು ಸ್ವತಂತ್ರರಾಗವದು ಕಾಂಗ್ರೇಸಿಗೆ ಬೇಕಾಗಿದ್ದಿಲ್ಲ. ಅದರಿಂದ ಬ್ರಿಟಿಶರ ಪಾಶ ತಪ್ಪಿದರೂ ಜರ್ಮನಿಯ ಇಲ್ಲವೆ ಜಪಾನದ ದಾಸ್ಯಪಾಶ ಕೊರಳಿಗೆ ಬಿದ್ದೀತೆಂಬ ಭಯದಿಂದ ಪಂ. ಜವಾಹರಲಾಲರೂ ಸುಭಾಷಚಂದ್ರರ ಜಪಾನಿ ಸಹಾಯದಿಂದ ಯೋಜಿತ ಆಕ್ರಮಣ ವನ್ನು ವಿರೋಧಿಸಿದ್ದರು.

ಪಾಯಿಸರಾಯರು ನಾಮಕರಣ ಮಾಡಿ ಕೇಂದ್ರ ಸರಕಾರದಲ್ಲಿ ಕಾಂಗ್ರೆಸ್ಸು ಮುಸ್ಲೀಂ ಲೀಗಿನ ಸಮಪ್ರಮಾಣದ ಮಿಶ್ರಣ ಮಾಡಿದರು. ಆರೆಂಟು ತಿಂಗಳಲ್ಲಿಯೇ ಅದು ಪೂರ್ಣ ಅಯಶಸ್ವಿಯಾಯಿತು. ದಿನಾಲು ಮಂತ್ರಿಮಂಡಳದಲ್ಲಿ ಘರ್ಷಣೆಯೇ ಘರ್ಷಣೆ. ಸರಕಾರದ ಒಂದು ಗೊತ್ತುವಳಿಯೂ ಸುಸೂತ್ರವಾಗಿ ಆಗಲಿಲ್ಲ. ಪ್ರತಿಯೊಂದಕ್ಕೂ ಅಡೆತಡೆ ಯನ್ನೊಡ್ಡುವದೇ ಜಿನ್ನಾಸಾಹೇಬರ ಮುಸ್ಲಿಂ ಲೀಗಿನ ಧೋರಣೆ ಆಗಿತ್ತು. ಇನ್ನು ಕೂಡಿ ನಡೆಯುವದು ಶಕ್ಯವೇ ಇಲ್ಲೆಂಬ ಪರಿಸ್ಥಿತಿ ನಿರ್ಮಾಣವಾಯಿತು. ಪಾಕಿಸ್ತಾನದ ಬೇಡಿಕೆ, ಕೂಗು, ಪ್ರಬಲವಾಗಹತ್ತಿತು. ಪಂ. ಜವಾಹರಲಾಲ ಸರದಾರ ವಲ್ಲಭಭಾಯಿ, ರಾಜಗೋಪಾಲಾಚಾರ್ಯ ಮೊದಲಾದವರು ಒಳ್ಳೇ ಪೇಚಿನಲ್ಲಿ ಬಿದ್ದರು. ಇದರ ಲಾಭವನ್ನು ಜಿನ್ನಾಸಾಹೇಬರು ಸಾಕಷ್ಟು ಪಡೆದರು. ಭಾರತಕ್ಕೆ ಸ್ವಾತಂತ್ರ್ಯ ಕೊಡುವ ಘೋಷಣೆ ಪಾರ್ಲಿಮೆಂಟನಲ್ಲಿ ಆಗಿತ್ತು. ಪಾಕಿಸ್ತಾನ ನಿರ್ಮಾಣ ಮಾಡದೆ ಭಾರತಕ್ಕೆ ಸ್ವಾತಂತ್ರ್ಯ ಕೊಡುವದನ್ನು ತಾನು ಉಗ್ರವಾಗಿ ಪ್ರತಿಭಟಿಸುವ ದಾಗಿ ಮುಸ್ಲೀಂ ಲೀಗೂ, ಜಿನ್ನಾಸಾಹೇಬರೂ ಅರ್ಭಟಿಸಿದರು. ಬ್ರಿಟಿಶ ಸರಕಾರಕ್ಕೂ ಇದೇ ಬೇಕಾಗಿತ್ತು. ಮುಸ್ಲೀಂ ಲೀಗು ಅವರ ಮುದ್ದಿನ ಕೂಸಾಗಿತ್ತು. ದೇಶವಿಭಜನೆಯ ವಿಷಗಾಳಿ ಭರದಿಂದ ಬೀಸಹತ್ತಿತು.

ಗಾಂಧೀಜಿಯವರ ಉದಾರತೆ.

ಗಾಂಧೀಜಿಯವರಿಗೆ ಅತ್ಯಂತ ದುಃಖವಾಯಿತು. ಒಂದು ಕಡೆಗೆ ದೇಶವಿಭಜನೆಯ ಚಿತ್ರ, ಇನ್ನೊಂದು ಕಡೆಗೆ ಅನಿವಾರ್ಯವಾಗಿ ಅದಕ್ಕೆ ಒಪ್ಪಬೇಕೆಂಬ ಕಾಂಗ್ರೆಸ ವರ್ಕಿಂಗ ಕಮಿಟಿಯ ಬಹುಮತದ ವಿಚಾರ ಧಾರೆಯ ಚಿತ್ರ ! ಈ ಭಾರಿ ಗೊಂದಲದ ದ್ವಂದದಲ್ಲಿ ಗಾಂಧೀಜಿಯವರು ಸಿಕ್ಕರು.

ಮುಸ್ಲೀಂ ಲೀಗಿನ, ಜಿನ್ನಾಸಾಹೇಬರ, ಮನವೊಲಿಸುವ ಯಾವ ಪ್ರಯತ್ನವನ್ನೂ ಗಾಂಧೀಜಿ ಬಿಡಲಿಲ್ಲ. ಪಾಕಿಸ್ತಾನದ ಬೇಡಿಕೆಯನ್ನು ಬಿಟ್ಟದ್ದಾದರೆ ಭಾರತವನ್ನು ಮುಸ್ಲೀಂರೇ ಆಳುವಂತೆ ಘಟನೆಯಲ್ಲಿ ಬದಲಾವಣೆ ಮಾಡಿಕೊಡುವದಾಗಿಯೂ ಸಹ ಅವರು ಹೇಳಿದರು. ಸಂಯುಕ್ತ ಮತದಾನ ಪದ್ಧತಿಯಿಂದ ಪಾರ್ಲಿಮೆಂಟನಲ್ಲಿ, ರಾಜ್ಯ ಶಾಸನ ಸಭೆಗಳಲ್ಲಿ, ನೂರಕ್ಕೆ ೪೦ ರಷ್ಟು ಸ್ಥಳಗಳನ್ನು ಮುಸ್ಲೀಮರಿಗೆ ಕಾದಿಡಲೂ ತಾನು ಒಪ್ಪುವದಾಗಿ ಗಾಂಧೀಜಿ ಸಾರಿದರು. ಗಾಂಧೀಜಿಯವರು ಹಿಂದೂ ಮುಸ್ಲೀಂ

ಎಲ್ಲರ ಮೇಲೆ ಮಾತೃವಾತ್ಸಲ್ಯದಿಂದ ಪ್ರೀತಿ ಮಾಡುತ್ತಿದ್ದದ್ದೇ ಇದಕ್ಕೆ ಕಾರಣ. ಹಟಮಾರಿ ಹುಡುಗನಿಗೆ, ಮೂರ್ಖ ಮಗನಿಗೆ, ತುಸು ಅಧಿಕಾರ ಹೆಚ್ಚು ಕೊಟ್ಟರೂ ಅಡ್ಡಿಯಿಲ್ಲ ಮನೆ ಒಡೆಯಬಾರದೆಂದು ಅವರು ಈ ರೀತಿ ಉದಾರತೆ ತೋರಿಸಿದರು. ಆದರೆ ಮುಸ್ಲೀಂ ಲೀಗಿನಮೇಲೆ ಇದರ ಯಾವ ಪರಿಣಾಮವೂ ಆಗಲಿಲ್ಲವಷ್ಟೇ ಅಲ್ಲ ಕಾಂಗ್ರೆಸಿಗರಾದ ಮುಸಲ್ಮಾನರೂ ಕೊನೆಗೆ ಗಾಂಧೀಜಿಯನ್ನು ನಂಬಲಿಲ್ಲ. ಅವರಿಗೆ ನಿಷ್ಠ ನಾದ ಒಬ್ಬ ಮುಖಂಡನೂ ಉಳಿಯಲಿಲ್ಲ. ಇದಾಯಿತು ಮುಸ್ಲೀಮರ ಬಗ್ಗೆ. ನೂರಕ್ಕೆ ೪೦ ರಷ್ಟು ಸ್ಥಳ ಕಾಯಿದೆ ಮಂಡಲಗಳಲ್ಲಿ ಮುಸ್ಲೀಮರಿಗೆ ಕಾದಿಡುವದರಿಂದ ಇಡೀ ಭಾರತವೇ ಪಾಕಿಸ್ತಾನವಾದೀತೆಂದು ರಾಜಾಜಿ, ವಲ್ಲಭಭಾಯಿ, ಪಂಡಿತಜಿಯವರೂ ಭಾವಿಸಿ ಗಾಬರಿಯಾದರು. ದೇಶವಿಭಜನೆ ಅನಿವಾರ್ಯವೇ ಆದರೆ ಆಗಲಿ, ಆದರೆ ಇಡೀ ಭಾರತವೇ ಪಾಕಿಸ್ತಾನವಾಗುವದು ಬೇಡವೆಂದು ಅವರು ಆಲೋಚಿಸಹತ್ತಿದರು. ಜನತೆಯ ಅಭಿಪ್ರಾಯವೂ ಇದೇ ರೀತಿಯದಾಗಿತ್ತು.

ಕಾಲಕರ್ಮ ಕೂಡಿಬಂತು !

ದೇಶವಿಭಜನೆ ಅನಿವಾರ್ಯವಾಯಿತು. ಆಳರಸರಿಗೆ, ಬ್ರಿಟಿಶರಿಗೆ ಸ್ವತಂತ್ರ ಭಾರತವು ಸಮರ್ಥ ಭಾರತವಾಗುವದು ಬೇಕಾಗಿದ್ದಿಲ್ಲ. ಅದು ದುರ್ಬಲವಾಗಿರಬೇಕೆಂಬ ಅತ್ಯಂತ ಹೀನ ವಿಚಾರದಿಂದ ಅವರು ಚದುರಂಗದಾಟ ಆಡಹತ್ತಿದರು. ಭಾರತವನ್ನು ಒಡೆದು ಎರಡು ಹೋಳು ಮಾಡುವಷ್ಟರಿಂದಲೇ ಅವರಿಗೆ ಸಮಾಧಾನವಿದ್ದಿಲ್ಲ. ಆದರೆ ೫೬೪ ದೇಶೀ ಸಂಸ್ಥಾನಿಕರಿಗೂ ಸಂಪೂರ್ಣ ಸ್ವಾತಂತ್ರ್ಯ ಕೊಡಲು ಅವರು ಯೋಚಿಸಿದರು. ಈವರೆಗೆ ಕುನ್ನಿಗಳಂತೆ ಬ್ರಿಟಿಶರ ಕಾಲು ನೆಕ್ಕುತ್ತ ಬಂದ ಅಭಿಮಾನಶೂನ್ಯರಾಗಿದ್ದ ಸಂಸ್ಥಾನಿಕರಿಗೆ, ಅವರು ಎಂದೂ ಕನಸಿನಲ್ಲಿ ಸಹ ಸ್ವತಂತ್ರತೆಯನ್ನು ಬೇಡದಿದ್ದರೂ ಅವರೆಲ್ಲರಿಗೂ ಸಂಪೂರ್ಣ ಸ್ವಾತಂತ್ರ್ಯ ಕೊಡುವ ಹವಣಿಕೆಯಲ್ಲಿ ಸರಕಾರಕ್ಕೆ ಆನಂದವಾಗಹತ್ತಿತು. ಈ ಸ್ವಾತಂತ್ರ್ಯವನ್ನು ಕೊಡುವದೇ ಆಗಿದ್ದರೆ ಸಂಸ್ಥಾನೀ ಪ್ರಜೆಗಳಿಗೆ ಕೊಡಬೇಕಾಗಿತ್ತು. ಕೆಲವೊಂದು ಸಂಸ್ಥಾನಗಳಲ್ಲಿ ಪ್ರಜೆಗಳು ಆ ರೀತಿ ಆಂದೋಲನವನ್ನೂ ಹೂಡಿದ್ದರು. ಅವರನ್ನು ಸಮಾಧಾನ ಪಡಿಸುವದನ್ನು ಬಿಟ್ಟು ಎಂದೂ ಸ್ವಾತಂತ್ರ್ಯ ಬೇಡದ ಸಂಸ್ಥಾನಿ ಯಜಮಾನರಿಗೆ ಸಂಪೂರ್ಣ ಸ್ವಾತಂತ್ರ್ಯ ದಯಪಾಲಿಸಲು ಬ್ರಿಟಿಶ ಸರಕಾರ ದುಷ್ಟಬುದ್ಧಿಯಿಂದ ಮುಂದಾಯಿತು ! ಸುಮಾರು ಆರುನೂರು ಸಂಸ್ಥಾನಿಕರು ಅಲ್ಲಲ್ಲಿ ಸ್ವತಂತ್ರ ಘಟಕಗಳನ್ನು ಸ್ಥಾಪಿಸಿದರೆ ಮೊದಲೇ ವಿಭಜನೆಯಿಂದ ದುರ್ಬಲವಾದ ಭಾರತವು ಅತ್ಯಂತ ದುರ್ಬಲವಾಗಿ ಕಡೆತನಕ ಪಾರ್ಶ್ವವಾಯುವಿನ ಬೇನೆಯಿಂದ ಬಳಲುತ್ತಿರಬೇಕೆಂಬ ನೀಚ, ಹೀನವೃತ್ತಿಯನ್ನು ಬ್ರಿಟಿಶ ಸರಕಾರ ತಳೆಯಿತು. ಪಾಕಿಸ್ತಾನ ನಿರ್ಮಾಣ ಮಾಡಿ ಹಿಂದೂ ಮುಸ್ಲೀಂ ಭೂತವನ್ನು ಎಬ್ಬಿಸಿ ಹೊರಗೂ ಒಳಗೂ ಯುದ್ಧದ